ಸಿ. ಸಿ. ನಂಃ 2324/2024

ಡಿ.ಡಬ್ಲ್ಯೂಃ 01

( ಇಂದು ದಿನಾಂಕಃ 06.03.2025 ರಂದು ಡಿ. ಡಬ್ಲು 1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

ಸಾಕ್ಷಿದಾರರು ತನಗೆ ಹಿಂದಿ ಭಾಷೆ ಬಿಟ್ಟು ಬೇರೆ ಭಾಷೆ ಬರುವುದಿಲ್ಲ ಎಂದು ಹೇಳಿದ್ದರಿಂದ ಶ್ರೀ ವಿ. ಜಿ. ಎ ವಕೀಲರನ್ನು ತರ್ಜುಮೆದಾರರನ್ನಾಗಿ ನೇಮಿಸಿಕೊಳ್ಳಲಾಯಿತು.

**<u>ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಾದ ಶ್ರೀ ಎ. ಎ. ಎ. ರವರಿಂದಃ</u>**

ನಾನು ಹಿಂದಿ ಮಾಧ್ಯಮದಲ್ಲಿ ಪಿ. ಯು. ಸಿ ತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ 6 ನೇ ತರಗತಿಯಿಂದ ಒಂದು ವಿಷಯ ಇಂಗ್ಲಿಷ್ ಇತ್ತು. 6 ನೇ ತರಗತಿಯಿಂದ ದ್ವಿತಿಯ ಪಿಯುಸಿ ತನಕ ನನಗೆ ಇಂಗ್ಲಿಷ್ ಭಾಷಾ ವಿಷಯ ಇತ್ತು. ನಿಮಗೆ ಇಂಗ್ಲಿಷ್ ಓದಲು ಬರೆಯಲು ಬರುತ್ತದೆ ಎಂದರೆ ನಾನು ಇಂಗ್ಲಿಷ್ ವಿಷಯವನ್ನು ನಕಲು ಹೊಡೆದು ಪಾಸ್ ಆಗಿರುತ್ತೇನೆ ಅಂತಾ ಉತ್ತರಿಸುತ್ತಾರೆ.

2. ನಾನು ಈಗ ಕಾರವಾರದ ಧನಲಕ್ಷ್ಮಿ ಕಾಂಪ್ಲೆಕ್ಸಿನ ಮೊದಲ ಮಹಡಿಯಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಅದೇ ವಿಳಾಸಕ್ಕೆ ನನಗೆ ಮಾನ್ಯ ನ್ಯಾಯಾಲಯದಿಂದ ಸಮನ್ಸು ಬಂದಿರುತ್ತದೆ ಎಂದರೆ ಸರಿ. ನಾನು ನಿಪಿ. 5 ರ ಅಂಚೆ ಸ್ವೀಕೃತಿಯಲ್ಲಿ ಕಾಣಿಸಿರುವ ವಿಳಾಸದಲ್ಲಿ ವಾಸವಿದ್ದೇನೆ ಎಂದರೆ ಸರಿ. ನನ್ನ ಮನೆಯಲ್ಲಿ ನಾನು, ನನ್ನ ಗಂಡ ಮತ್ತು ಮೂರು ಮಕ್ಕಳು ವಾಸವಿರುತ್ತೇವೆ.

3. ನಿಪಿ. 5 ರಲ್ಲಿ ಕಾಣುವ ಸಹಿ ನಿಮ್ಮದು ಎಂದರೆ ಸಾಕ್ಷಿ ನನ್ನದಲ್ಲ ಎಂದು ಉತ್ತರಿಸುತ್ತಾರೆ. ಈ ಪ್ರಕರಣ ದಾಖಲಿಸುವ ಮೊದಲು ನಿಮಗೆ ಪಿರ್ಯಾದುದಾರರ ಪರ ವಕೀಲರಿಂದ ನೋಟಿಸು ಬಂದಿತ್ತೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ. ನಿಪಿ. 3 ರ ವಕೀಲರ ನೋಟಿಸು ನಿಮಗೆ ಬಂದಿತ್ತು ಎಂದರೆ ಸರಿ.

4. ದಿಃ 26.11.2014 ರಂದು ನನ್ನ ಹಾಗೂ ಸಾಮಸನ್ ಡಿಸೋಜಾ, ಪ್ರೀಟಾ ಡಿಸೋಜಾ, ನಾಗೇಶ ವರ್ಣೇಕರ್ ಇವರ ನಡುವೆ ಒಂದು ಕರಾರು ಆಗಿತ್ತು ಎಂದರೆ ಸರಿ. ಸಾಕ್ಷಿಗೆ ಸದ್ರಿ ಕರಾರುಪತ್ರದ ನೋಟರಿ ದೃಡೀಕೃತ

ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿಕೊಂಡಿರುವ ಕಾರಣ ಸದ್ರಿ ದಾಖಲೆಯನ್ನು ನಿಪಿ. 10 ಅಂತಾ ಗುರುತಿಸಲಾಯಿತು.

5. ನಾನು ಬೃಂದಾವನ ಅಪಾರ್ಟಮೆಂಟಿನಲ್ಲಿ ಖರೀದಿಸಿರುವ ಪ್ಲ್ಯಾಟು ಸುಸಜ್ಜಿತ ಪ್ಲ್ಯಾಟು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ. 1 ರ ಕ್ರಯಪತ್ರದಲ್ಲಿ ಸದ್ರಿ ಪ್ಲ್ಯಾಟು ಸುಸಜ್ಜಿತವಾಗಿರುವ ಪ್ಲ್ಯಾಟು ಎಂಬ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಅದು ಸುಸಜ್ಜಿತವಾಗಿರುವ ಪ್ಲ್ಯಾಟು ಅಂತಾ ಉತ್ತರಿಸುತ್ತಾರೆ. ನಾನು ಸದ್ರಿ ಪ್ಲ್ಯಾಟನ್ನು ಖರೀದಿಸುವಾಗ ಅದರ ಒಂದು ಬೆಡ್ ರೂಮಿನಲ್ಲಿ ಒಂದು ಕಪಾಟು ಮತ್ತು ಒಂದು ಮಂಚ ಇತ್ತು. ಅದನ್ನು ಹೊರತುಪಡಿಸಿ ಬೇರೆ ಯಾವದೇ ಇಂಟೆರಿಯರ್ ಡಿಸೈನ್ ವಗೈರೆ ಇರಲಿಲ್ಲ ಎಂದರೆ ಸರಿ.

6. ನನ್ನ ಗಂಡನಿಗೆ ನಾಗೇಶ ವರ್ಣೇಕರ್ ರವರು ಪರಿಚಯಸ್ಥರು ಎಂದರೆ ಸರಿ. ನಾನು ಅವರ ಕಛೇರಿಗೆ ಬಹಳಷ್ಟು ಬಾರಿ ಹೋಗಿ ಬಂದಿರುತ್ತೇನೆ ಎಂದರೆ ಸರಿ. ಅವರು ಇಂಟಿರಿಯರ್ ಡಿಸೈನರ್ ಮತ್ತು ಇಂಜಿನಿಯರ್ ಎಂಬುದು ನನಗೆ ಗೊತ್ತಿದೆ ಎಂದರೆ ಸರಿ. ನನ್ನ ಪ್ಲ್ಯಾಟಿನಲ್ಲಿ ಸದ್ರಿ ನಾಗೇಶ ವರ್ಣೇಕರ್ ರವರು ಇಂಟೆರಿಯರ್ ಡಿಸೈನಿಂಗ್ ಕೆಲಸವನ್ನು ಮಾಡಿರುತ್ತಾರೆ ಎಂದರೆ ಸರಿ. ಸದ್ರಿ ನಾಗೇಶ ವರ್ಣೇಕರ್ ರವರು ರೂ. 9,00,000/- ವೆಚ್ಚದ ಇಂಟೆರಿಯರ್ ಡಿಸೈನ್ ಕೆಲಸವನ್ನು ನನ್ನ ಪ್ಲ್ಯಾಟಿನಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಅವರು ಎಷ್ಟು ವೆಚ್ಚದ ಸದ್ರಿ ಕೆಲಸವನ್ನು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕ್ರಯದ ಪ್ರತಿಫಲದ ಬಾಬ್ತು ರೂ. 24,00,000/- ಹಾಗೂ ಇಂಟೆರಿಯರ್ ಡಿಸೈನ್ ಕೆಲಸ ಸೇರಿ ಒಟ್ಟೂ ರೂ. 32,00,000/- ಹಣವನ್ನು ನಾನು ನಾಗೇಶ ವೆರ್ಣೇಕರ್ ಇವರಿಗೆ ಕೊಡುವ ಬಗ್ಗೆ ನಮ್ಮ ನಡುವೆ ಕರಾರು ಆಗಿತ್ತು ಎಂದರೆ ಸರಿಯಲ್ಲ. ಆ ಬಗ್ಗೆ ಸಾಮಸನ್ ಡಿಸೋಜಾ, ಪ್ರೀಟಾ ಡಿಸೋಜಾ, ನಾಗೇಶ ವೆರ್ಣೇಕರ್ ಇವರ ನಡುವೆ ಒಂದು ಕರಾರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಕರಾರಿನ ಪ್ರಕಾರ ಕ್ರಯದ ಪ್ರತಿಫಲದ ಹಣ ಸಂಪೂರ್ಣ ನಾಗೇಶ ವೆರ್ಣೇಕರ್ ರವರಿಗೆ ಹೋಗಬೇಕು ಎಂಬುದಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಕರಾರಿನ ವಿಷಯ ನನಗೆ ಗೊತ್ತಿದ್ದರಿಂದ ಕ್ರಯದ ಪ್ರತಿಫಲದ ಹಣ ಮತ್ತು ಇಂಟೆರಿಯರ್ ಡಿಸೈನ್ ಕೆಲಸದ ಖರ್ಚು ವೆಚ್ಚ ಸೇರಿ ರೂ. 32,00,000/- ಹಣವನ್ನು ನಾನು ನಾಗೇಶ ವೆರ್ಣೇಕರ್ ರವರಿಗೆ ಕೊಡುವುದರ ಬಗ್ಗೆ ನಿಶ್ಚಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಬಾಬ್ತು ನಾನು ಪಿರ್ಯಾದುದಾರರಾದ ಶ್ರೀ ನಾಗೇಶ ವೆರ್ಣೇಕರ್ ಇವರಿಗೆ ರೂ. 29 ಲಕ್ಷ ಹಣ ಮಾತ್ರ ಸಂದಾಯ ಮಾಡಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ಪಿರ್ಯಾದುದಾರರಿಗೆ ರೂ. 3 ಲಕ್ಷ ಹಣ ಕೊಡಲು ಬಾಕಿ

ಇದೆ ಎಂದರೆ ಸರಿಯಲ್ಲ.  ಸದ್ರಿ ರೂ. 3 ಲಕ್ಷ ಹಣವನ್ನು ಪಾವತಿಸುವ ಸಲುವಾಗಿ ನೀವು ನಿಪಿ. 1 ರ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಕ್ರಯಪತ್ರ ಆಗುವ ಮೊದಲೇ ನಾವು ಸದ್ರಿ ಪ್ಲ್ಯಾಟಿನ ಸ್ವಾದೀನ ಹೊಂದಿದ್ದ ಕಾರಣ ಗ್ಯಾರಂಟಿ ಸಲುವಾಗಿ ಸದ್ರಿ ಚೆಕ್ಕನ್ನು ನಾನು ಪಿರ್ಯಾದುದಾರರಿಗೆ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ.  ಸಾಕ್ಷಿ ಮುಂದುವರಿದು ಸದ್ರಿ ಪ್ಲ್ಯಾಟ್ ಖರೀದಿಸಲು ಸಾಲ ಮಂಜೂರು ಆದ ಮೇಲೆ ಚೆಕ್ಕನ್ನು ನನಗೆ ವಾಪಾಸು ಕೊಡುತ್ತೇನಾಗಿ ಪಿರ್ಯಾದುದಾರರು ಹೇಳಿದ್ದರು ಅಂತಾ ನುಡಿಯುತ್ತಾರೆ.  ಪಿರ್ಯಾದುದಾರರಿಗೆ ಕೊಡಬೇಕಾದ ರೂ. 3 ಲಕ್ಷ ಹಣದ ಪಾವತಿಗಾಗಿ ನಾನು ನಿಪಿ 1 ರ ಚೆಕ್ಕನ್ನು ಅವರಿಗೆ ಕೊಟ್ಟಿದ್ದು ಈಗ ಅದು ಗ್ಯಾರಂಟಿ ಸಲುವಾಗಿ ಕೊಟ್ಟಿದ್ದು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಪಿರ್ಯಾದುದಾರರು ಈ ಪ್ರಕರಣದಲ್ಲಿ ಹಾಜರುಪಡಿಸಲಾದ ನಿಪಿ. 8 ರ ಸಿಡಿಯಲ್ಲಿನ ವಿಡಿಯೋ ದೃಶ್ಯಾವಳಿಗಳನ್ನು ನಾನು ನೋಡಿರುತ್ತೇನೆ.  ಸದ್ರಿ ವಿಡಿಯೋ ದೃಶ್ಯಾವಳಿಗಳಲ್ಲಿ ಕಾಣುವಂತೆ ನನ್ನ ಗಂಡ ಪಿರ್ಯಾದುದಾರರ ಕಛೇರಿಯಲ್ಲಿ ಇರುವದು ಕಂಡು ಬರುತ್ತದೆ ಎಂದರೆ ಸರಿ.  ಸದ್ರಿ ವಿಡಿಯೋದಲ್ಲಿ ನನ್ನ ಗಂಡ ಪಿರ್ಯಾದುದಾರರಿಗೆ ರೂ. 2,50,000/- ಹಣ ಕೊಡುತ್ತೇನೆ ಅಂತ ಒಪ್ಪಿಕೊಂಡಿರುವುದು ಕಂಡುಬರುತ್ತದೆ ಎಂದರೆ ಸಾಕ್ಷಿ ಸದ್ರಿ ರೂ. 2,50,000/- ಯಾವ ಕಾರಣಕ್ಕಾಗಿ ಕೊಡುತ್ತೇನೆ ಅಂತಾ ಹೇಳಿರುವುದನ್ನು ನನ್ನ ಗಂಡನ ಬಳಿ ಕೇಳಬೇಕಾಗುತ್ತದೆ ಅಂತಾ ಉತ್ತರಿಸುತ್ತಾರೆ.  ಪಿರ್ಯಾದಿಯಲ್ಲಿ ಹೇಳಿರುವ ವ್ಯವಹಾರ ಹೊರತುಪಡಿಸಿ ನನ್ನ ಗಂಡ ಹಾಗೂ ಪಿರ್ಯಾದುದಾರರ ನಡುವೆ ಬೇರೆ ಯಾವದೇ ವ್ಯವಹಾರ ಇಲ್ಲ ಎಂದರೆ ಸರಿ.  ನಾನು ಪಿರ್ಯಾದುದಾರರಿಗೆ ಕೊಡಬೇಕಾದ ರೂ. 3 ಲಕ್ಷ ಬಾಕಿ ಹಣದ ಪೈಕಿ ನನ್ನ ಗಂಡ ರೂ. 2,50,000/- ಕೊಡುತ್ತೇನೆ ಅಂತಾ ಒಪ್ಪಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.  ನಿಪಿ. 1 ರ ಚೆಕ್ಕಿನ ಮೊಬಲಗಿನ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾದಂ., ಕಾರವಾರ